ಬೇಗ ಕೆಲಸಕ್ಕೆ ಸೇರಿದೆ. ಜಾಹೀರಾತು ಕಂಪನಿಯಲ್ಲಿ ಎಂಟು ವರ್ಷ ಮಣ್ಣು ಹೊತ್ತೆ. ಆಮೇಲೆ ಸೆಕ್ಸಿಸ್ಟ್ ಜೋಕ್‌ಗಳಿಗೆ ಜನ ಬಿದ್ದು ಬಿದ್ದು ನಗುತ್ತಾರೆ ಎಂದು ಗೊತ್ತಾಯಿತು. ಆಮೇಲೆ ಅದಕ್ಕೆ ಕೈಹಾಕಿದೆ. ಯಾಕೋ ಬೇಗ ವಾಕರಿಕೆ ಬಂತು. 2013ರಿಂದ ನಾನು ಹಾಸ್ಯ ಪ್ರಸಂಗಗಳನ್ನು ಹೇಳುವ ಸ್ಟ್ಯಾಂಡ್–ಅಪ್ ಕಾಮಿಡಿಯನ್ ಆಗಿದ್ದೇನೆ' ಎನ್ನುತ್ತಾರೆ ಕುನಾಲ್.

ಬರಹಗಾರ ವರುಣ್ ಗ್ರೋವರ್, ವ್ಯಂಗ್ಯಕಾರ ಸಂಜಯ್ ರಾಜೌರ, ಸಂಗೀತಗಾರ ರಾಹುಲ್ ರಾಮ್ ಮೂವರೂ ಕುನಾಲ್ 'ರಾಜಕೀಯ ಹಾಸ್ಯಗಾರ' ಆಗಲು ಪ್ರೇರಣೆ ನೀಡಿದರು. ಆಮೇಲೆ ಇಂಧನವೂ ಆದರು. ಹಾಸ್ಯವನ್ನು ದಾಟಿಸಲು ಬೇಕಾದ ಬರವಣಿಗೆ, ವಿಟ್ ಹಾಗೂ ಹಿನ್ನೆಲೆ ಸಂಗೀತವನ್ನು ಅವರು ಒದಗಿಸಿದ್ದು ತಮ್ಮ ಪ್ರದರ್ಶನಕ್ಕೆ ಅಗತ್ಯವಿದ್ದ ತಿರುವು ಎನ್ನುವುದು ಕುನಾಲ್ ಅನುಭವದ ನುಡಿ.

'ನಮ್ಮ ದೇಶದಲ್ಲಿ ಜನ ಸದಾ ಕೋಪದಿಂದಲೇ ಇರುತ್ತಾರೆ. ಮನಮೋಹನ್ ಸಿಂಗ್ ಪ್ರಧಾನಿ ಆಗಿದ್ದಾಗ ಅವರ ಮೇಲೆ ಕೋಪ. ಈಗ ಪ್ರಧಾನಿ ಮೋದಿ ಇರುವಾಗಲೂ ಇನ್ಯಾವುದಕ್ಕೋ ಕೋಪ. ಇತಿಹಾಸವನ್ನಂತೂ ಒಬ್ಬೊಬ್ಬ ರಾಜಕಾರಣಿ ಇಲ್ಲಿ ತನ್ನ ಮೂಗಿನ ನೇರಕ್ಕೆ ಬಳಸುತ್ತಾ ಇರುತ್ತಾನೆ. ನಾನು ಅದಕ್ಕೇ ನಿರ್ದಿಷ್ಟವಾದ ಪಥವನ್ನು ಆಯ್ಕೆ ಮಾಡಿಕೊಂಡೆ. ನಾನು ಮೋದಿ ವಿರೋಧಿ ಎಂದೇ ಅನೇಕರು ಬಿಂಬಿಸಿದ್ದಾರೆ. ಆದರೆ, ನನಗಿರುವುದು ಮೂಲಭೂತ ಪ್ರಶ್ನೆಗಳು. ಅವಕ್ಕೆ ಉತ್ತರ ಕೊಡದೆ ಸುಮ್ಮನೆ ಜಟಾಪಟಿಗೆ ಇಳಿಯುವ ಮಂದಿಗೆ ಎಂದೂ ಹೆದರಲಿಲ್ಲ. ಅದು ಆತ್ಮವಿಶ್ವಾಸ ಹೆಚ್ಚಿಸಿತು' ಎಂದು ಕುನಾಲ್ ತುಸು ಭಾವುಕ ಧ್ವನಿಯಲ್ಲೇ ಪ್ರತಿಕ್ರಿಯಿಸಿದರು.

ಪ್ರಧಾನಿ ಹಾಗೂ ಬಿಜೆಪಿಯನ್ನು ಪ್ರಶ್ನಿಸಿದ್ದಕ್ಕಾಗಿಯೇ ಅಪಾರ್ಟ್‌ಮೆಂಟ್ ಮಾಲೀಕ ಅವರನ್ನು ಮನೆಯಿಂದ ಹೊರಗೆ ಹಾಕಿದ್ದರು. ನಡುರಾತ್ರಿ ಫೋನ್‌ಗೆ ಜೀವ ಬೆದರಿಕೆ ಒಡ್ಡಿದ ಕರೆಗಳು ಬಂದವು. ಬಾರ್‌ಗೆ ಹೋಗಿದ್ದಾಗ, 'ಹೋಗಿ... ರಾಹುಲ್ ಗಾಂಧಿಯದ್ದನ್ನು ಚೀಪು' ಎಂದು ಕೆಟ್ಟ ಭಾಷೆಯಲ್ಲಿ ಕೆಲವರು ನಿಂದಿಸಿದ್ದೂ ಇದೆ. ಇವೆಲ್ಲವನ್ನೂ ತಮ್ಮ ತಮಾಷೆಯ ಪ್ರಸಂಗಗಳನ್ನು ಗಟ್ಟಿಗೊಳ್ಳಲು ಪ್ರೇರಣೆ ಎಂದೇ ಭಾವಿಸಿರುವ ಕುನಾಲ್ ವಿವಿಧೆಡೆ ಕಾರ್ಯಕ್ರಮಗಳನ್ನು ಕೊಡಲು ಈಗಲೂ ಸಿದ್ಧ. ಅವರದ್ದೇ ಹೆಸರಿನ ವೆಬ್‌ಸೈಟ್ ಕೂಡ ಇದೆ.

'ಸ್ಟ್ಯಾಂಡ್–ಅಪ್ ಕಾಮಿಡಿಯಲ್ಲಿ ಪುರುಷ ಪ್ರಾಧಾನ್ಯವಿದೆ. ಪ್ರಶಸ್ತಿ ಸಿಂಗ್ ತರಹದ ಪ್ರತಿಭಾವಂತ ಹೆಣ್ಣುಮಗಳೂ ನಗೆಯುಕ್ಕಿಸುತ್ತಿದ್ದಾರೆ. ಅಂಥವರ ಸಂಖ್ಯೆ ಇನ್ನಷ್ಟು ಹೆಚ್ಚಬೇಕು. ನಕ್ಕು ಹಗುರಾಗಲು ರಾಜಕೀಯ ಸಿದ್ಧಾಂತಗಳನ್ನು, ಪೂರ್ವಗ್ರಹಗಳನ್ನು ಬಿಡಬೇಕು. ಮುಖ್ಯವಾಗಿ ನಾವು ಮನುಷ್ಯರಾಗಬೇಕು' ಎಂದು ಕುನಾಲ್ ಮಾತಿಗೆ ಪೂರ್ಣವಿರಾಮ ಇಡುತ್ತಾರೆ. ■



'ನಮ್ದು ಕೆ ಓಪನ್ ಮೈಕ್' ಬಳಗ

# ಮಿತಿ ತಿಳಿದು... ಹಾದಿ ತುಳಿದು

'NAMDUಕೆ' ಎನ್ನುವುದು ಕನ್ನಡದ ಯೂಟ್ಯೂಬ್ ಹಾಸ್ಯದ ಚಾನೆಲ್. ಮೈಸೂರಿನ ಇನ್ಫೋಸಿಸ್‌ನಲ್ಲಿ ಕೆಲಸ ಮಾಡುತ್ತಿದ್ದ ಮೂವರು ಯುವಕರು ಇದನ್ನು ಐದು ವರ್ಷಗಳ ಹಿಂದೆ ತೇಲಿಬಿಟ್ಟರು. ಶ್ರವಣ್ ಐತಾಳ್, ರಜತ್ ಹಾಗೂ ಸಂದೀಪ್ ಸೇರಿ ಪ್ರಾರಂಭಿಸಿದ ಈ ಚಾನಲ್‌ಗೆ 19 ಸಾವಿರ ಮಂದಿ ಚಂದಾದಾರರಿದ್ದಾರೆ. ಈ ವೇದಿಕೆಯಲ್ಲಿನ ಸಾಧ್ಯತೆ ಹಾಗೂ ಕನ್ನಡದ ಮಿತಿಗಳ ಕುರಿತು ಶ್ರವಣ್ ಮುಕ್ತವಾಗಿ ಮಾತನಾಡಿದರು.

'ಮೊದಲು ನಾವು ಸ್ಕೆಚಸ್ ಮಾಡುತ್ತಾ ಇದ್ದೆವು. ಸಮಕಾಲೀನ ವಿಷಯಗಳನ್ನು ಇಟ್ಟುಕೊಂಡು ಲಘುವಾದ, ರಂಜನೀಯ ವಿಡಿಯೊಗಳನ್ನು ಮಾಡತೊಡಗಿದೆವು. ಬಹುತೇಕ ಅಣಕು ವಿಡಿಯೊಗಳು ನಮ್ಮ ಆಯ್ಕೆ. ಇಂಟರ್‌ನೆಟ್‌ನಲ್ಲಿ ಕನ್ನಡದ ಹೊಸ ಹಾಸ್ಯ ಕೊಡಬೇಕು ಎನ್ನುವುದಷ್ಟೇ ಉದ್ದೇಶವಾಗಿತ್ತು. ಡಬ್ಬಲ್ ಮೀನಿಂಗ್ ಇಲ್ಲದ, ಅಭಿರುಚಿಯಲ್ಲಿ ರಾಜಿಯಾಗದ ಹಾಸ್ಯ ಕೊಡಬೇಕೆಂದು ಮುಂದಾಗಿದ್ದೆವು' ಎಂದು ತಮ್ಮ ಪ್ರಯತ್ನ ಪ್ರಾರಂಭವಾದ ಬಗೆಯನ್ನು ಅವರು ತೆರೆದಿಟ್ಟರು.

ದಾವಣಗೆರೆಯ ಯುಬಿಡಿಟಿ ಎಂಜಿನಿಯರಿಂಗ್ ಕಾಲೇಜಿನಲ್ಲಿ ಓದಿ, ಸಾಫ್ಟ್‌ವೇರ್ ಎಂಜಿನಿಯರ್ ಆದ ಶ್ರವಣ್ ಮೊದಲು ಝೀರೊ ಬಜೆಟ್‌ನಲ್ಲಿ, ತಮ್ಮದೇ ಲ್ಯಾಪ್‌ಟಾಪ್ ಮತ್ತಿತರ ಅಗತ್ಯ ಪರಿಕರಗಳೊಂದಿಗೆ ಕಾರ್ಯಕ್ರಮ ಶುರುಮಾಡಿದ್ದು. ಆಮೇಲಾಮೇಲೆ ಸಣ್ಣ ಮೊತ್ತದ ಬಜೆಟ್ಟನ್ನು ಅದಕ್ಕಾಗಿ ವಿನಿಯೋಗಿಸುತ್ತಾ ಬಂದರು.

'ಯೂಟ್ಯೂಬ್‌ನಲ್ಲಿ ಕನ್ನಡ ಚಾನಲ್‌ಗಳನ್ನು ನೋಡುವವರ ಸಂಖ್ಯೆ ತುಂಬಾ ಕಡಿಮೆ. ಅಲ್ಲಿ 2 ಲಕ್ಷ ಜನ ನೋಡಿದರೆ 12 ಸಾವಿರ ರೂಪಾಯಿಯಷ್ಟು ಹಣ ಸಿಗಬಹುದಷ್ಟೆ.